# ಸುದ್ದಿ ಸಂಚಯ

## ರಾಮಕೃಷ್ಣ ಮಿಷನ್ನಿನ ೨೦೦೦–೨೦೦೧ನೇ ಸಾಲಿನ ಆಡಳಿತ ಸಂಸ್ಥೆಯ ವರದಿ

ಈ ಸಾಲಿನಲ್ಲಿ ನಡೆದ ಮುಖ್ಯವಾದ ಅಭಿವೃದ್ಧಿ ಕಾರ್ಯಗಳೆಂದರೆ ಬೆಳಗಾವಿ, ಜಮ್ಮು ಮತ್ತು ವಿಜಯವಾಡಗಳಲ್ಲಿ ರಾಮಕೃಷ್ಣ ಮಹಾ ಸಂಘದ ಹೊಸ ಕೇಂದ್ರಗಳ ಸ್ಥಾಪನೆಯಾದುದು. ದೆಹಲಿಯ ವೈದ್ಯಕೀಯ ಕೇಂದ್ರದಲ್ಲಿ ಒಂದು Phaco Emulsification ಘಟಕವನ್ನು ಸ್ಥಾಪಿಸಲಾಯಿತು. ಬಾಂಗ್ಲಾದೇಶದ ಬಾಗೇರ್‌ಹಾಟ್ ಕೇಂದ್ರದಲ್ಲಿ ಶ್ರೀರಾಮಕೃಷ್ಣರ ಒಂದು ಹೊಸ ದೇವಾಲಯವನ್ನು ತೆರೆಯಲಾಯಿತು. ಹೈದರಾಬಾದ್ ಕೇಂದ್ರದಲ್ಲಿ ವಿವೇಕಾನಂದ ಮಾನವ ಉತ್ಕೃಷ್ಟತಾ ಸಂಸ್ಥೆಯ ಉದ್ಘಾಟನೆಯಾಯಿತು. ಪಶ್ಚಿಮ ಬಂಗಾಳದ ಇಚ್ಛಾಪುರದಲ್ಲಿ ಸಂಚಾಲನ ವೈದ್ಯಕೀಯ ಘಟಕವನ್ನು ಪ್ರಾರಂಭಿಸಲಾಯಿತು. ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಮಿಷನ್ನಿನ ಒಂದು ಹೊಸ ಕೇಂದ್ರ ಪ್ರಾರಂಭವಾಯಿತು.

ಈ ಸಾಲಿನಲ್ಲಿ ಮಿಷನ್ ಕ್ಷಾಮ ಪರಿಹಾರ ಮತ್ತು ಪುನರ್ವಸತಿ ಕಾರ್ಯವನ್ನು ಬೃಹತ್ ಪ್ರಮಾಣದಲ್ಲಿ ನಡೆಸಿತು. ಇದಕ್ಕೆ ತಗಲಿದ ಒಟ್ಟು ಖರ್ಚು ೬.೫೫ ಕೋಟಿ ರೂಗಳು ಮತ್ತು ೧೭೦೦ ಹಳ್ಳಿಗಳಲ್ಲಿ ಸುಮಾರು ೧೨ ಲಕ್ಷ ಜನರು ಇದರ ಪ್ರಯೋಜನವನ್ನು ಪಡೆದಿದ್ದಾರೆ. ಹಿಂದಿನ ವರ್ಷ ಒರಿಸ್ಸಾದಲ್ಲಿ ಪ್ರಾರಂಭವಾದ ಬೃಹತ್ ಪುನರ್ವಸತಿ ಕಾರ್ಯವು ಪೂರ್ಣಗೊಳ್ಳುವುದರಲ್ಲಿದೆ. ಅಲ್ಲಿ ೩೦೩೩ ಮನೆಗಳೂ ೩ ಶಾಲೆಗಳೂ ಇನ್ನೂ ಇತರ ಸೌಲಭ್ಯಗಳೂ ಇರುತ್ತವೆ. ಇದಕ್ಕಿಂತಲೂ ಬೃಹತ್ ಪ್ರಮಾಣದ ಪುನರ್ವಸತಿ ಕಾರ್ಯವನ್ನು ಗುಜರಾತಿನಲ್ಲಿ ಪ್ರಾರಂಭಿಸಲಾಗಿದೆ.

ಸುಮಾರು ೨.೧೯ ಕೋಟಿ ರೂಗಳನ್ನು ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ-ವೇತನ (scholarship); ವೃದ್ಧರು, ರೋಗಿಗಳು ಮತ್ತು ಅನಾಥರಿಗೆ ಧನಸಹಾಯ ಮುಂತಾದವುಗಳಿಗೆ ಖರ್ಚುಮಾಡಲಾಯಿತು. ೯ ಆಸ್ಪತ್ರೆಗಳು, ೧೦೭ ಔಷಧಾಲಯಗಳು ಮತ್ತು ಸಂಚಾರಿ ಔಷಧ ವಿತರಣೆ ಕೇಂದ್ರಗಳ ಮೂಲಕ ೫೭ ಲಕ್ಷ ಜನರಿಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಯಿತು. ಇದಕ್ಕೆ ತಗಲಿದ ಒಟ್ಟು ಖರ್ಚು ರೂ.೨೭.೫೪ ಕೋಟಿ. ೧.೧೨ ಲಕ್ಷ ವಿದ್ಯಾರ್ಥಿಗಳು ನಮ್ಮ ಶಿಕ್ಷಣ ಸಂಸ್ಥೆಗಳ ಪ್ರಯೋಜನವನ್ನು ಪಡೆದಿರುವರು. ಇವರಲ್ಲಿ ೩೩ ಸಾವಿರ ವಿದ್ಯಾರ್ಥಿನಿಯರು. ರೂ.೭೪.೫೭ ಕೋಟಿಯನ್ನು ಶಿಕ್ಷಣ ಕಾರ್ಯದಲ್ಲಿ ವಿನಿಯೋಗಿಸಲಾಯಿತು. ಗ್ರಾಮೀಣ ಮತ್ತು ಪರಿಶಿಷ್ಟ ವರ್ಗದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ವಿನಿಯೋಗಿಸಿದ ಒಟ್ಟು ಹಣ ರೂ. ೯.೧೧ ಕೋಟಿ.

ಈ ಎಲ್ಲ ಯೋಜನೆಗಳಲ್ಲಿ ನಮಗೆ ಅನೇಕ ರೀತಿಯ ಸಹಾಯ ಮಾಡಿದ ನಮ್ಮ ಸದಸ್ಯರು ಮತ್ತು ಸ್ನೇಹಿತರಿಗೆ ನಮ್ಮ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇವೆ, ಮತ್ತು ಅವರ ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸುತ್ತೇವೆ.

**ಸ್ವಾಮಿ ಸ್ಮರಣಾನಂದ**
**(ಪ್ರಧಾನ ಕಾರ್ಯದರ್ಶಿಗಳು)**

## ಮೌಲ್ಯಶಿಕ್ಷಣ ತರಬೇತಿ ಯೋಜನೆ

ಇಂದು ಸಮಾಜದಲ್ಲಿ ಹಬ್ಬುತ್ತಿರುವ ಭ್ರಷ್ಟಾಚಾರ, ಭಯೋತ್ಪಾದನೆಗಳಿಂದ ಯುವಕರಲ್ಲಿನ ಅರ್ಥಹೀನತೆ, ಕೌಟುಂಬಿಕ ಮೌಲ್ಯಗಳ ಕುಸಿತ ಮತ್ತು ಮಾನಸಿಕ ಅಶಾಂತಿ ಕಾತರತೆಗಳು ಪರಡಿ ಜನರು ಪರಿತಪಿಸುತ್ತಿದ್ದಾರೆ. ಈ ದೋಷಗಳ ನಿವಾರಣೆಗೆ ಮೌಲ್ಯವಂತ ಜೀವನ ಅತ್ಯಾವಶ್ಯಕ. ಇದಕ್ಕಾಗಿ ಬಾಲ್ಯದಿಂದಲೇ ತರಬೇತಿಯನ್ನು ಪಡೆಯುವುದು ಆವಶ್ಯಕ. ಅದಕ್ಕಾಗಿ ವಿದ್ಯಾರ್ಥಿಗಳಿಗೆ ಮೌಲ್ಯಶಿಕ್ಷಣವನ್ನು ನೀಡುವ ವಿಷಯದಲ್ಲಿ ಅನೇಕ ಸಂಘಸಂಸ್ಥೆಗಳು ಹಲವಾರು ಯೋಜನೆಗಳನ್ನು ಹಾಕಿಕೊಳ್ಳುತ್ತಿವೆ. ಉಪಾಧ್ಯಾಯ ಶಿಕ್ಷಣ ಸಲಹಾಸಮಿತಿ (NCTE)ಯವರು ಇತ್ತೀಚೆಗೆ ಮೌಲ್ಯಶಿಕ್ಷಣದ ಮೇಲೆ ಹೆಚ್ಚು ಒತ್ತನ್ನು ನೀಡುತ್ತಿರುವರು. ಅದರಲ್ಲಿ ಉಪಾಧ್ಯಾಯರಿಗೆ ತರಬೇತಿಯನ್ನು ನೀಡುವುದು ಅವರ ಯೋಜನೆಯಾಗಿದೆ. ಇಂತಹ ಒಂದು ಮುಖ್ಯ ತರಬೇತಿ ಕೇಂದ್ರವಾಗಿ ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ (RIMSE)ಯನ್ನು ಆರಿಸಿಕೊಂಡಿರುವರು. ಇತ್ತೀಚೆಗೆ ಅಲ್ಲಿ ನಾಲ್ಕು ದಿನಗಳ ಎರಡು ಅಂತಹ ತರಬೇತಿ ಶಿಬಿರಗಳು ನಡೆದವು. (ಡಿಸೆಂಬರ್ ೧೮ರಿಂದ ೨೧ ಮತ್ತು ೨೬ರಿಂದ ೨೯). ಕರ್ನಾಟಕ, ತಮಿಳುನಾಡು, ಆಂಧ್ರ ಮತ್ತು ಕೇರಳ ರಾಜ್ಯಗಳಿಂದ ಉಪಾಧ್ಯಾಯರು, ಪ್ರಾಂಶುಪಾಲರು, ವಿದ್ಯಾರ್ಥಿ ಮೇಲ್ವಿಚಾರಕರು ಮತ್ತು ವಿಶ್ವವಿದ್ಯಾನಿಲಯದ ವಿಭಾಗೀಯ ಮುಖ್ಯಸ್ಥರು ಈ ಶಿಬಿರದಲ್ಲಿ ಭಾಗವಹಿಸಿದ್ದರು. NCTE ಮುಖ್ಯಸ್ಥರಾದ ಶ್ರೀ ಮಹೇಶ್ವರಿ ಮತ್ತು ಉಪಾಧ್ಯಕ್ಷರಾದ ಶ್ರೀ ಖಾನ್ ಅವರು ಈ ಶಿಬಿರಗಳಲ್ಲಿ ಭಾಗವಹಿಸಿದರು.

ಪ್ರತಿದಿನ ಪ್ರಾರ್ಥನೆ, ನಿರ್ದೇಶಿತ ಧ್ಯಾನ ಮತ್ತು ಯೋಗಾಸನಗಳೊಂದಿಗೆ ಶಿಬಿರವು ಪ್ರಾರಂಭವಾಗುತ್ತಿತ್ತು. ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ಮೌಲ್ಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿವಿಧ ವಿಷಯಗಳನ್ನು ಕುರಿತ ಉಪನ್ಯಾಸಗಳು ಮತ್ತು ಪ್ರಶ್ನೋತ್ತರಗಳು ಪ್ರತಿದಿನ ಇರುತ್ತಿದ್ದವು. ಮೌಲ್ಯಶಿಕ್ಷಣಕ್ಕೆ ಸಂಬಂಧಿಸಿದಂತೆ ಕಾರ್ಯಾಗಾರಗಳನ್ನು ನಡೆಸಲಾಯಿತು. ಪ್ರತಿನಿಧಿಗಳೆಲ್ಲರೂ ಅತ್ಯಂತ ಆಸಕ್ತಿಯಿಂದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಅವರಲ್ಲಿ ಹಿಂದೂ, ಕ್ರಿಶ್ಚಿಯನ್ ಮತ್ತು ಮುಸ್ಲಿಮರಿದ್ದರು.

ಸುಂದರ ತೋಟ, ಸ್ವಚ್ಛತೆ, ಪ್ರಶಾಂತತೆಗಳಿಂದ ಕೂಡಿದ RIMSEಯ ಅಪೂರ್ವ ವಾತಾವರಣ ಪ್ರತಿನಿಧಿಗಳ ಮೇಲೆ ವಿಶೇಷ ಪರಿಣಾಮವನ್ನು ಉಂಟುಮಾಡಿತು. ಈ ಶಿಬಿರದ ವಿವಿಧ ಕಾರ್ಯಕ್ರಮಗಳನ್ನು ಸಂಗ್ರಹಿಸಿ ಒಂದು ಸಿ.ಡಿ. ಯನ್ನು ತಯಾರಿಸಲಾಗುತ್ತಿದೆ, ಮತ್ತು ಅದನ್ನು ದೇಶಾದ್ಯಂತ ವಿವಿಧ ಶಿಕ್ಷಣ ಸಂಸ್ಥೆಗಳಿಗೆ ಕಳಿಸಲಾಗುತ್ತದೆ. ಅದರ ಪ್ರಯೋಜನವನ್ನು ಪಡೆದು ಮೌಲ್ಯ ಶಿಕ್ಷಣವನ್ನು ತಮ್ಮ ತಮ್ಮ ಸಂಸ್ಥೆಗಳಲ್ಲಿ ಜಾರಿಗೆ ತರುವಂತಾಗಿ ಉಪಾಧ್ಯಾಯರು ವಿದ್ಯಾರ್ಥಿಗಳೆಲ್ಲರೂ ಉನ್ನತ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅನುಸರಿಸಬೇಕೆಂಬುದು ಈ ಕಾರ್ಯಕ್ರಮದ ಉದ್ದೇಶ.